# ಕಾರಂತರ ಕರ್ಮಭೂಮಿ ಬಾಲವನ

ಪುತ್ತೂರಿನ ‘ಬಾಲವನ’ ಶಿವರಾಮ ಕಾರಂತರ ಸ್ಮೃತಿಗಳನ್ನು ಹೊಂದಿರುವ ಕರ್ಮಭೂಮಿ. ಆ ಉದ್ಯಾನ ಚಿಣ್ಣರಿಗೆ ಕಾರಂತಜ್ಜನನ್ನು ಪರಿಚಯಿಸುವ ಹಾಗೂ ‘ಬಾಳ್ವೆಯೇ ಬೆಳಕು’ ಸಂದೇಶವನ್ನು ಸಾರುವ ಸ್ಥಳ.

■ ಕೋಡಿಬೆಟ್ಟು ರಾಜಲಕ್ಷ್ಮಿ



ಪುತ್ತೂರಿನ ಬಾಲವನದಲ್ಲಿನ ಶಿವರಾಮ ಕಾರಂತರ ಮನೆ




ಕನ್ನಡದ ಹೆಮ್ಮೆಯ ಲೇಖಕ ಶಿವರಾಮ ಕಾರಂತರು ‘ಸಾಹಿತಿ’ ಎಂದು ಪ್ರಸಿದ್ಧರಾಗಿದ್ದರೂ ಜೀವನದ ಪ್ರತಿಕ್ಷಣವನ್ನೂ ಅನ್ವೇಷಣೆಗೆ ಒಡ್ಡಿಕೊಂಡು ಬಾಳಿದವರು. ವಿರಾಟ್ ಸ್ವರೂಪದ ಬಾಳುವೆ ಅವರದು. ಬರಹವಷ್ಟೇ ಅಲ್ಲ, ಪ್ರಕೃತಿಯ ಮೇಲಿನ ಪ್ರೀತಿ, ಜನಪರ ಕೆಲಸಗಳ ಕುರಿತು ಆಸಕ್ತಿ, ಸಾಮಾಜಿಕ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬದುಕನ್ನು ಸಮೃದ್ಧವಾಗಿಸಿಕೊಂಡಿದ್ದರು.

ತಾವು ಬರೆದ ಪುಸ್ತಕಕ್ಕೆ ತಾವೇ ಮುಖಪುಟ ಚಿತ್ರಗಳನ್ನು ಮಾಡಿದರು, ತಾವೇ ಮುದ್ರಿಸಬೇಕು ಎಂದು ಮುದ್ರಣಾಲಯವನ್ನು ತೆರೆದರು, ಯಕ್ಷಗಾನದ ಹೆಜ್ಜೆಗಳನ್ನು ಕಲಿತು ಪ್ರಯೋಗಗಳನ್ನು ಮಾಡಿದರು, ವೇಷಭೂಷಣವನ್ನು ಸ್ವತಃ ಆಸಕ್ತಿಯಿಂದ ಪರಿಷ್ಕರಿಸಿದರು, ವಾದ್ಯಗಳ ನುಡಿಸುವಿಕೆಯನ್ನು ಕಲಿತರು, ಸಿನಿಮಾಗಳನ್ನು ನಿರ್ದೇಶಿಸಿದರು, ಅಭಿನಯಿಸಿದರು ಕೂಡ. ಗಿಡಗಳನ್ನು ನೆಟ್ಟರು ಮತ್ತು ಪುಟ್ಟ ಪುಟ್ಟ ಮಕ್ಕಳು ನಾಲ್ಕು ಗೋಡೆಗಳನ್ನು ದಾಟಿ ಹೊರಬಂದು ಪ್ರಕೃತಿಯ ಮಡಿಲಿನಲ್ಲಿ ಕಲಿಯಬೇಕು ಎಂಬ ಆಶಯದಿಂದ ತಮ್ಮದೇ ಆದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದರು.

ಯೌವನದ ದಿನಗಳಲ್ಲಿ ಹುಟ್ಟೂರು ಕೋಟ ಅಥವಾ ಮಂಗಳೂರು ನಗರಕ್ಕೆ ಸೀಮಿತರಾಗದೇ ದಟ್ಟ ಹಸಿರಿನ ಮಡಿಲಿನಲ್ಲಿ ಜೀವನ ಆರಂಭಿಸಿದರು. ಜೀವನ್ಮುಖಿ ಕಾರಂತರ ಸಮಾಜಮುಖಿ ಚಟುವಟಿಕೆಗಳನ್ನು ಗಮನಿಸಿ ಅವರನ್ನು ಪುತ್ತೂರಿಗೆ ಆಹ್ವಾನಿಸಿದವರು ಸಹಕಾರಿ ಧುರೀಣರಾಗಿದ್ದ ಮೊಳಹಳ್ಳಿ ಶಿವರಾಯರು. 1930ರಲ್ಲಿ 28ರ ಹರೆಯದ ಕಾರಂತರು ಪುತ್ತೂರಿಗೆ ಕಾಲಿಟ್ಟರು. ಸಮಾಜ ಸುಧಾರಣೆ, ಗ್ರಾಮೋದ್ಧಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. 1934ರಲ್ಲಿ ಪರ್ಲಡ್ಕ ಎಂಬಲ್ಲಿ ಆರು ಎಕರೆ ಜಾಗ ಖರೀದಿಸಿ ಮನೆಕಟ್ಟಿದ್ದಲ್ಲದೆ, ಮಕ್ಕಳ ಸೃಜನಶೀಲತೆಯ ವಿಕಾಸವಾಗಬೇಕು ಎಂಬ ದೃಷ್ಟಿಯಿಂದ ಶಾಲೆಯೊಂದನ್ನು ತೆರೆದಿದ್ದರು. ಸರ್ಕಾರದ ಸಾಂಪ್ರದಾಯಿಕ ಚೌಕಟ್ಟಿನಿಂದ ಯಾವತ್ತೂ ದೂರವಿದ್ದ ಕಾರಂತರು, ಈ ಶಾಲೆಗೆ ಮಾನ್ಯತೆಯನ್ನು ಪಡೆಯುವ ಗೋಜಿಗೆ ಹೋಗಲಿಲ್ಲ. ಸ್ವಂತ ಖರ್ಚಿನಲ್ಲಿ ಶಿಕ್ಷಕರಿಬ್ಬರನ್ನು ನೇಮಿಸಿದರು. ಆದರೆ ಸರ್ಕಾರದ ಮಾನ್ಯತೆಯೇ ಮುಖ್ಯವೆಂದು ಭಾವಿಸುವ ಪೋಷಕರ ಪ್ರತಿಕ್ರಿಯೆ ನೀರಸವಾಗಿತ್ತು. ಆ ಶಾಲೆಯ ದೆಸೆಯಿಂದ ಕಾರಂತರ ನಿವಾಸದ ಜಾಗಕ್ಕೆ ‘ಬಾಲವನ’ ಎಂಬ ಹೆಸರು ಖಾಯಮ್ಮಾಯಿತು. ಆ ಜಾಗದಲ್ಲಿ ಅವರು ತಮ್ಮ ಜೀವಿತಾವಧಿಯ ನಲ್ವತ್ತಮೂರು ವರ್ಷಗಳನ್ನು ಪ್ರಯೋಗಕ್ಕೆ ಒಡ್ಡಿಕೊಂಡರು. ಮದುವೆಯಾಗಿ ಲೀಲಾವತಿಯವರು ಅವರ ಬಾಳಿನಲ್ಲಿ ಬಂದರು.

‘ಹರ್ಷ ಮುದ್ರಣಾಲಯ’ವನ್ನು ಮನೆಯ ಮೇಲ್ಭಾಗದ ಜಾಗದಲ್ಲಿ ಸ್ಥಾಪಿಸಿದ ಕಾರಂತರು, ಮೊಳೆಗಳನ್ನು ಜೋಡಿಸುವ ಕೌಶಲ ಕರಗತ ಮಾಡಿಕೊಂಡಿದ್ದರು. ಮದುವೆಗಳಿಗೆ ಆಮಂತ್ರಣ ಪತ್ರಿಕೆ ಮುದ್ರಿಸುವ ವರಸೆ ಆಗಷ್ಟೇ ಶುರುವಾಗಿತ್ತು. ಹೀಗಾಗಿ ಅನೇಕ ಮದುವೆ ಆಮಂತ್ರಣಗಳ ಕರಡು ಬರೆಯುವ, ತಿದ್ದುವ ಕೆಲಸಗಳನ್ನು ಕಾರಂತರು ಮಾಡುತ್ತಿದ್ದ ಸ್ವಾರಸ್ಯಕರ ಕತೆಗಳನ್ನು ಹಿರಿಯರು ಹೇಳುವುದುಂಟು.

ಕಾರಂತರ ಲೋಕ ಪುಸ್ತಕಗಳಿಗೆ ಖಂಡಿತಾ ಸೀಮಿತವಾಗಿರಲಿಲ್ಲ. ಸಂವಾದ, ಚರ್ಚೆ, ಹೊಸ ವಿಚಾರಗಳ ಮಂಥನ ನಡೆಯುತ್ತಿರಬೇಕು ಎಂಬ